## ಗಾಂಧಿನಗರ ಪೋಸ್ಟ್

# ಕವಲು ದಾರಿಗಳಲ್ಲಿ ಪುನೀತ್

ಪುನೀತ್ ರಾಜ್‌ಕುಮಾರ್ ತಮ್ಮ ವೃತ್ತಿಜೀವನದಲ್ಲಿ ಹೊಸ ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಿದ್ದಾರೆ. ಇವು ನಟನೆಗೆ ಸಂಬಂಧಿಸಿದ ಪ್ರಯೋಗಗಳಲ್ಲ. ಇತ್ತೀಚೆಗಷ್ಟೇ ಹೋಂ ಬ್ಯಾನರ್ ಮೂಲಕ ಸಿನಿಮಾ ನಿರ್ಮಾಣದಲ್ಲಿ ತೊಡಗಿಕೊಂಡಿರುವ ಅವರು, ಈಗ ಆಡಿಯೊ ಕಂಪೆನಿಯೊಂದನ್ನು ಆರಂಭಿಸುವ ಉತ್ಸಾಹದಲ್ಲಿದ್ದಾರೆ.

'ಕವಲುದಾರಿ' ಪುನೀತ್ ನಿರ್ಮಾಣದ ಸಿನಿಮಾದ ಹೆಸರು. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದ ಖ್ಯಾತಿಯ ಹೇಮಂತ್ ರಾವ್ ಈ ಚಿತ್ರದ ನಿರ್ದೇಶಕರು. 'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ರಿಷಿ ಚಿತ್ರದ ನಾಯಕ. ಹಿರಿಯ ನಟ ಅನಂತನಾಗ್ ತಾರಾಗಣದಲ್ಲಿರುವ ಪ್ರಮುಖ ನಟ. ಸದಭಿರುಚಿಯ ಹಾಗೂ ಪ್ರಯೋಗಶೀಲ ಸಿನಿಮಾಗಳನ್ನು ನಿರ್ಮಿಸುವ ಉದ್ದೇಶ ಹೊಂದಿರುವ ಪುನೀತ್, ಪ್ರತಿಭಾವಂತ ತಂತ್ರಜ್ಞರು ಹಾಗೂ ಕಲಾವಿದರಿಗೆ ತಮ್ಮ ಚಿತ್ರಗಳಲ್ಲಿ ಅವಕಾಶ ಕಲ್ಪಿಸಲು ಉದ್ದೇಶಿಸಿದ್ದಾರೆ.

ಸಿನಿಮಾ ನಿರ್ಮಾಣದ ಜೊತೆಗೆ ಆಡಿಯೊ ಕಂಪೆನಿಯೊಂದನ್ನು ರೂಪಿಸುವ ಪ್ರಯುತ್ನದಲ್ಲಿಯೂ ಅವರಿದ್ದಾರೆ. ಅವರ ನಟನೆಯ 'ಅಂಜನೀಪುತ್ರ' ಸಿನಿಮಾದ ಮೂಲಕವೇ ಈ ಆಡಿಯೊ ಕಂಪೆನಿ ಶುರುವಾಗುವ ಸಾಧ್ಯತೆಗಳಿವೆ. ಹರ್ಷ ನಿರ್ದೇಶನದ 'ಅಂಜನಿಪುತ್ರ' ಚಿತ್ರದಲ್ಲಿ ಸ್ವತಃ ಪುನೀತ್ ಗೀತೆಯೊಂದನ್ನು ಹಾಡಿದ್ದಾರೆ. ಆಡಿಯೊ ಕಂಪೆನಿಗಳು ಅಷ್ಟೇನೂ ಲಾಭದಾಯಕವಲ್ಲದ ದಿನಗಳಲ್ಲಿ ಪುನೀತ್ 'ರಾಜ್‌ಕುಮಾರ್ ಮ್ಯೂಸಿಕ್' ಹೆಸರಿನ ಹೊಸ ಸಂಸ್ಥೆ ರೂಪಿಸುತ್ತಿರುವುದು ಕುತೂಹಲಕರವಾಗಿದೆ.





# ನಾಲ್ಕೂ ನಿಟ್ಟಿನಿಂದ..

ರೋಹಿತ್ ಪದಕಿ ಕನ್ನಡ ಚಿತ್ರರಂಗದಲ್ಲಿ ಚಿತ್ರಸಾಹಿತಿಯಾಗಿ ಗುರ್ತಿಸಿಕೊಂಡವರು. 'ದಯವಿಟ್ಟು ಗಮನಿಸಿ' ಅವರ ನಿರ್ದೇಶನದ ಚೊಚ್ಚಿಲ ಸಿನಿಮಾ. ಟ್ರೈಲರ್ ಹಾಗೂ ಗೀತೆಗಳ ಮೂಲಕ ಗಾಂಧಿನಗರದಲ್ಲಿ ಕುತೂಹಲ ಕೆರಳಿಸಿರುವ ಈ ಸಿನಿಮಾ ಇದೀಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಅ. 20ರಂದು ತೆರೆಗೆ).

'ದಯವಿಟ್ಟು ಗಮನಿಸಿ' ನಾಲ್ವರು ಹೆಣ್ಣುಮಕ್ಕಳ ಕಥೆಗಳ ಕೊಲಾಜ್. ಸಮಾಜವನ್ನು ನಾಲ್ಕೂ ನಿಟ್ಟಿನಿಂದ ಪ್ರತಿನಿಧಿಸುವಂತಹ ಹೆಣ್ಣುಮಕ್ಕಳ ಕಥೆಯನ್ನು ರೋಹಿತ್ ತಮ್ಮ ಚಿತ್ರದಲ್ಲಿ ಭಿನ್ನವಾಗಿ ನಿರೂಪಿಸಿದ್ದಾರಂತೆ. ಸಮಾಜದ ಎಲ್ಲ ವರ್ಗಗಳ ಹೆಣ್ಣುಮಕ್ಕಳು ಚಿತ್ರದ ಪಾತ್ರಗಳೊಂದಿಗೆ ಗುರ್ತಿಸಿಕೊಳ್ಳಲಿದ್ದಾರೆ ಎನ್ನುವುದು ಚಿತ್ರತಂಡದ ನಂಬಿಕೆ. ಸಂಗೀತಾ ಭಟ್, ಸಂಯುಕ್ತಾ ಹೊರನಾಡು, ಸುಕೃತಾ ವಾಗ್ಲೆ ಹಾಗೂ ಭಾವನಾ ರಾವ್ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಸಂಗೀತಾ ಶಾಲಾ ಶಿಕ್ಷಕಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರೆ, ಐಟಿ ಕಂಪೆನಿಯಲ್ಲಿ ಕೆಲಸ ಮಾಡುವ ಬೋಲ್ಡ್ ಹುಡುಗಿಯಾಗಿ ಸಂಯುಕ್ತಾ ನಟಿಸಿದ್ದಾರೆ. ಸುಕೃತಾ ಅವರದು ಪತ್ರಕರ್ತೆಯ ಪಾತ್ರ. ಹತಾಶ ಗೃಹಿಣಿಯ ಪಾತ್ರವನ್ನು ಭಾವನಾ ಪೋಷಿಸಿದ್ದಾರೆ. ವಸಿಷ್ಠ ಸಿಂಹ, ರಘು ಮುಖರ್ಜಿ ಹಾಗೂ ರಾಜೇಶ್ ನಟರಂಗ ತಾರಾಗಣದಲ್ಲಿರುವ ಪ್ರಮುಖ ಕಲಾವಿದರು. ನಟಿ ಮೇಘನಾ ರಾಜ್ ಹಾಡೊಂದರಲ್ಲಿ ಕುಣಿದಿದ್ದಾರಂತೆ. ಅನೂಪ್ ಸೀಳಿನ್ ಸಂಗೀತ ಸಂಯೋಜನೆಯ ಗೀತೆಗಳು ಜನಪ್ರಿಯಗೊಂಡಿರುವುದು ಚಿತ್ರದ ಗೆಲುವಿನ ನಿರೀಕ್ಷೆಗೆ ಇಂಬು ನೀಡಿದೆ.

■ ರಘು